(SRI H. SIDDAVEERAPPA)

intubation needed was found impossible. Nasal intubation was therefore done by the senior An esthetist and the patient was connected to Birds Respirator and a con tant watch on his blood pressure, pulse and pupils was kept. In spite of all these efforts, the patient's temperature rose too high, the body became rigid, his blood pressure started falling and pulse became irregular.

The senior Anaesthetist was again called into join the resuscitation efforts. But the heart suddenly stopped. External cardiac message was tried again, but the patient did not show any sign of improvement, inspite of energetic resuscitation measures. He was pronounced dead at 1-00 P.M.

In the opinion of all the doctors present, the death was due to cardiac arrest with hyperpyrexia. Such a death is considered a rare mishap, but in this case it is not due to any neglect on the part of any of the doctors present. It is unfortunate that in spite of the best efforts of a team of doctors, the life of this young man could not be saved. I wish to express my sincere condolence to the bereaved family.

MATTER UNDER RULE 312

re : **Leakage of Question Papers in Mysore University**

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷಣಿಯರೇ, ಮೈಸೂರು ವಿಶ್ವವಿದ್ಯಾನಿಲಯದ ಏಪ್ರಿಲ್ (ಎಗ್ಜಾಮಿನೇಷನ್‌ನಲ್ಲಿ) ನಡೆಯುತಕ್ಕ ಪರೀಕ್ಷೆಯ ಆರು ಪ್ರಶ್ನೆ ಪತ್ರಿಕೆಗಳು ಬಯಲಾಗಿರುತ್ತವೆಂಬ ಸುದ್ದಿಯನ್ನು ನಾನು ಕೇಳುತ್ತಿದ್ದೇನೆ. ಇದು ನಿಜವಾಗಿಯೂ ಬಹಳ ದುರದೃಷ್ಟ. ಈ ಪ್ರಶ್ನೆ ಪತ್ರಿಕೆಗಳು ಬಯಲಾಗುವುದಕ್ಕೆ ಸುಮಾರು ಲಕ್ಷಗಟ್ಟಲೆ ಹಣವನ್ನು ವಿದ್ಯಾರ್ಥಿಗಳಿಂದ ಈ ಕಾಲೇಜಿನಲ್ಲಿ ಕೆಲಸಮಾಡತಕ್ಕ ಪ್ರೊಫಸರ್ಸ್, ರೀಡರ್ಸ್ ಮತ್ತು ಲೆಕ್ಚರರ್ಸ್ ಗಳು ವಸೂಲು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಇದರಿಂದ ವಿದ್ಯಾ ಪ್ರಗತಿಗೆ ಕುಂದನ್ನು ತಂದಿದ್ದಾರೆ. ಇದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೇ ಒಂದು ಧಕ್ಕೆಯನ್ನು ಇವರು ತಂದಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಯಾವ ಯಾವ ಪ್ರಶ್ನೆ ಪತ್ರಿಕೆಗಳು ಬಯಲಾಗಿವೆ ಎಂಬುದನ್ನು ಬೇಕಾದರೂ ನಾನು ಹೇಳಬಲ್ಲೆ... .

ಶ್ರೀ ಎ. ಆರ್. ಬದರಿನಾರಾಯಣ (ವಿದ್ಯಾಶಾಖೆಯ ಮಂತ್ರಿಗಳು).—ತಾವೇ ಸ್ಟೇಟ್‌ಮೆಂಟ್ ಮಾಡುತ್ತೀರಾ ?

ಶ್ರೀ ಎಚ್. ಎಸ್. ಸಿದ್ದಪ್ಪ —ಮಾಡುವುದಿಲ್ಲ, ಅಗಿರುವುದನ್ನು ಹೇಳುತ್ತೇನೆ. ಮೈಸೂರು ಯೂನಿವರ್ಸಿಟಿಯಲ್ಲಿ ಕರ್ತವ್ಯವನ್ನು ಮಾಡುತ್ತಿರುವ ಪ್ರೊಫೆಸರ್‌ಗಳಿಗೆ ನನಗೆ ಪ್ರೀತಿಪೂರ್ವಕವಾಗಿ ಗೌರವವಿದೆ. ಆದರೆ ಅವರು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿರುವುದರಿಂದ ರಾಜೀನಾಮೆ ಕೊಡಬೇಕು ಅಥವಾ ಸರಕಾರ ಅವರನ್ನು ಆ ಹುದ್ದೆಯಿಂದ ತೆಗೆಯಬೇಕು ಎಂದು ಮನವಿ ಮಾಡುತ್ತೇನೆ. ಈ ಬಗ್ಗೆ ಜುಡಿಷಿಯಲ್ ಪ್ರೊಬ್ ಮಾಡಬೇಕು. ಹೇಗೆ ಬಹಾರಿಗೆ ಪ್ರಶ್ನೆ ಪತ್ರಿಕೆ ಬಂತು ಎಂದು ಕೂಲಂಕಷವಾಗಿ ವಿಮರ್ಶೆಮಾಡಿ ಅದನ್ನು ಈ ಸಭೆಗೆ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಆರ್. ಬದರೀನಾರಾಯಣ.—ಈ ವಿಚಾರವನ್ನು ಹೇಳುತ್ತಾ **ಶ್ರೀಮಾನ್ ಸಿದ್ದಪ್ಪ** ನವರು ಒಂದು ಮಾತನ್ನು ಹೇಳಿದರು, ಈಗ ಪೈಸ್ಟಫನ್ನಲರ್ ಆಗಿರುವವರ ವಿಚಾರದಲ್ಲಿ ತಮಗೆ ಗೌರವವಿದೆ ಎಂದು ಪ್ರೀಠಿಕೆಯಲ್ಲಿ ಹೇಳಿ ಮುಂದಕ್ಕೆ ಹೋಗಿದ್ದಾರೆ. ಈ ವಿಚಾರದಲ್ಲಿ ನನ್ನ ಗಮನಕ್ಕೆ ಬಂದಿರುವುದು ಕಂಟ್ರೋಲರ್ ಆಫ್ ಎಗ್ಸಾಮಿನೇಷನ್ಸ್‌ನಿಂದ ಅಧಿಕೃತವಾಗಿ ಬಂದಿರುವುದು 4 ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿವೆ ಎಂದು. ಮೇಜರ್ ಬಾಷಾ ನಂಬರ್ 3 ಈ ಪ್ರಶ್ನೆಪತ್ರಿಕೆ 6ನೇ ತಾರೀಖು ಲೀಕ್‌ಆಯ್ತು ಈ ಪರೀಕ್ಷೆಯನ್ನು ಪೋಸ್ಟ್‌ಪೋನ್ ಮಾಡಿದೆ. 13-4-197 ರಲ್ಲಿ ಕಾಸ್ಟ್‌ಅಕೌಂಟಿಂಗ್ ಆಫ್ ಫೈನಲ್ ಬಿ. ಕಾಂ—ಸ್ಟ್ರಾಟಜಿಗ್ಯುಲೇಷನ್ಸ್—ಇದಕ್ಕೆ ಸಂಬಂಧಪಟ್ಟ ಪ್ರಶ್ನೆಪತ್ರಿಕೆ ಒಂದು ಗಂಟೆಗೆ ಲೀಕ್ ಆಗಿರುವುದು ಗೊತ್ತಾಯಿತು ಅಂದು 2 ಗಂಟೆಗೆ ಪರೀಕ್ಷೆಯಿತ್ತು, ಅವನ್ನು 24 ನೆಯ ತಾರೀಖಿಗೆ ಪೋಸ್ಟ್‌ಪೋನ್ ಮಾಡಿದೆ. ಇನ್ನೊಂದು ಮ್ಯಾನಸ್ಕ್ರಿಪ್ಟ್ ಕಾಪಿ ಆಫ್ ಫೈನಲ್ ಬಿ.ಎಸ್‌ಸಿ. ಮೇಜರ್ 2 ಮ್ಯಾಥಮ್ಯಾಟಿಕ್ಸ್ ಇದರ ಪರೀಕ್ಷೆ 14 ನೆಯ ತಾರೀಖು ಇತ್ತು, ಇದನ್ನು 26 ಕ್ಕೆ ಪೋಸ್ಟ್‌ಪೋನ್ ಮಾಡಿದೆ ಮ್ಯಾನಸ್ಕ್ರಿಪ್ಟ್ ಕಾಪಿ ಆಫ್ ಜೂಯಾಲಜಿ ಮೇಜರ್ ಪೇಪರ್ 3—ಇದರ ಪರೀಕ್ಷೆ 17 ನೆಯ ತಾರೀಖು ಇದ್ದುದನ್ನು 26 ಕ್ಕೆ ಪೋಸ್ಟ್‌ಪೋನ್ ಮಾಡಿದೆ. ಹೀಗೆ 4 ಪ್ರಶ್ನೆಪತ್ರಿಕೆಗಳು ಲೀಕ್ ಆಗಿರುವುದು ಅಧಿಕೃತವಾಗಿ ಸರಕಾರದ ಗಮನಕ್ಕೆ ಬಂದಿವೆ, ಲೀಕೇಜ್ ಆಗಿರುವುದಕ್ಕೆ ಏನು ಕಾರಣ ಎಂಬುದು ಗೊತ್ತಿಲ್ಲ. ಯೂನಿವರ್ಸಿಟಿಯು ಒಂದು ಇನ್‌ವೆಸ್ಟಿಗೇಷನ್ ಕಮಿಟಿ ಮಾಡಿ ತಕ್ಷಣವೇ ಏಕೆ ಹೀಗೆ ಲೀಕೇಜ್ ಆಯ್ತು ಎಂದು ವರದಿಯನ್ನು ತರಿಸಲು ಕ್ರಮ ಕೈಕೊಂಡಿದೆ. ಈ ಸಮಿತಿ ಥೇರ್ಮನ್ ನಾರಾಯಣರಾವ್. ಇತರ ಸದಸ್ಯರು ಜಿ. ವಿ. ಆಂಜನಪ್ಪ ಮತ್ತು ಚನ್ನಬಸವನಗೌಡ. ಇಷ್ಟೂ ಸಮಾಚಾರ ಯೂನಿವರ್ಸಿಟಿಯಿಂದ ಬಂದಿದೆ. ಇದು ಬಹಳ ವಿಷಾದಕರವಾದ ವಿಚಾರ ಹೀಗಾಗಿರುವುದು. ಎಲ್ಲಿ ದೋಷವಿದೆ, ಏಕೆ ಹೀಗಾಯಿತು, ಯಾವ ಜಾಗದಲ್ಲಿ ಇದು ನಡೆಯಿತು ಎಂಬುದನ್ನು ಹೇಳತಕ್ಕದ್ದು ಬಹಳ ಕಷ್ಟ. ಗುಂಪುಗಾರಿಕೆ ಇದೆ ಎಂದು ಕೇಳಿದ್ದೇನೆ. ಬಹುಶಃ ಇದಕ್ಕೆ ಉನ್ನತ ಮಟ್ಟದ ಅಧ್ಯಾಪಕವರ್ಗ ಅಥವಾ ಅಧಿಕಾರವರ್ಗ ಹೆಚ್ಚಿನ ಆಸಕ್ತಿ ವಹಿಸಿದ್ದರೆ ಯಾವ ಒಂದು ಕಂಟ್ರೋಲರ್‌ದ್ದರೂ ಇದನ್ನು ಸರಿಪಡಿಸುವುದಕ್ಕಾಗುವುದಿಲ್ಲ ಎಂದು ಕಾಣುತ್ತದೆ. ಹೇಗಾದರೂ ಇರಲಿ, ಎಲ್ಲಿ ದೋಷವಿದೆ, ಯಾರು ಇದಕ್ಕೆ ಜವಾಬ್ದಾರರು ಎಂದು ಮೊದಲು ತಿಳಿಯಬೇಕಾಗಿದೆ. ಹೀಗಾಗಿರುವುದು ವಿಷಾದಕರ. ಹೀಗಾಗದಹಾಗೆ ಮುಂದೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಸಚಿವರು ಹೇಳಿದ 4 ಪ್ರಶ್ನೆಪತ್ರಿಕೆಗಳಲ್ಲದೆ ಇನ್ನು ಕೆಲವು ಲೀಕ್ ಆಗಿವೆ. 14-4-1973 ರಲ್ಲಿ 2 ರಿಂದ 5 ಗಂಟೆವರೆಗೆ ಇಂಡಸ್ಟ್ರಿಯಲ್ ಆರ್ಗನೈಜೇಷನ್ ಫೈನಲ್ ಬಿ.ಕಾಂ—I ಈ ಪ್ರಶ್ನೆಪತ್ರಿಕೆ ಬೈದಾಗಿವೆ, ಫೈನಲ್ ಬಿ.ಎಸ್‌ಸಿ. ಜಿಯಾಲಜಿ ಮೈನರ್ ಈ ಪ್ರಶ್ನೆಪತ್ರಿಕೆ ಸಹ ಬೈದಾಗಿದೆ.

Sri A. R. BADARINARAYANA.—I have received a letter from the Controller of Examinations that only 4 papers have leaked out. I am not in a position to accept or reject the information given by the Hon. Member Sri Siddappa.

Sri H. S. SIDDAPPA.—My child is attending this examination and has written to me saying that the examination has been postponed and want money immediately.

Sri A. R. BADARINARAYANA.—I do not dispute your information. But the Controller of Examinations has written to me that only 4 papers have been leaked out.

ಶ್ರೀ ಎಚ್. ಎನ್. ಸಿದ್ದಪ್ಪ.—ಒಂದು ಸಮಿತಿ ಮಾಡಿ ಎನ್‌ಕ್ವೈರಿ ಮಾಡುವುದಕ್ಕಿಂತ ಜುಡಿಷಿಯರ್ ಪ್ರೋಬ್ ಮಾಡಿದರೆ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರುವುದು. ಇಂಥ ಒಳ್ಳೆಯ ವಿದ್ಯಾಮಂತ್ರಿಗಳಿರುವಾಗ ಅನ್ಯಾಯವಾಗಬಾರದು. ಇದರಿಂದ ವೈಸ್ಚಾನರು ವಿಶ್ವವಿದ್ಯಾನಿಲಯದ ಕೀರ್ತಿಗೆ ಕಳಂಕ ಬರುವುದು. ಯಾರೇ ತಪ್ಪು ಮಾಡಿದ್ದರೂ ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು.